ಅವಳ ಮನಸ್ಸಿನ ವಿಸ್ಮೃತ ಮೂಲೆಯಿಂದ ಒಂದು ಹಾಡು ತೂರಿ ಬಂತು – 'ಕೆ ಸೆರಾ ಸೆರಾ... ಆ ವ್ಹಾಟ್ ವಿಲ್ ಬಿ... ವಿಲ್‌ಬೀ...' ಹೀಗೆ ಸಂತೋಷ ಸಂಭ್ರಮದಲ್ಲಿ ತೇಲಿದ ಈ ಬಂಗ್ಲೆ ಇಂದು ಇಂಥ ದುರಂತಕ್ಕೀಡಾಗಬಹುದು ಎಂದು ಸುಷಮಾ ಕನಸಿನಲ್ಲಿಯೂ ಭಾವಿಸಿರಲಿಲ್ಲ. ಇಂಥ ಆಲಿಶಾನ ಬಂಗ್ಲೆ ಒಂದು ದಿನ ಪಾಳುಬಿದ್ದ ಮನೆಯಾಗುತ್ತದೆಂದು ಎಂಟು ವರ್ಷದ ಸುಷಮಾ ಅಂದು ಕಲ್ಪಿಸುವುದಾದರೂ ಹೇಗೆ ಸಾಧ್ಯ? ಆದರೆ ಏನು ಆಗಬೇಕೋ ಅದೇ ಆಗುತ್ತದೆ, ಅದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಪ್ರಾರಬ್ಧ ತನ್ನ ಕೆಲಸ ಮಾಡಿಯೇ ಮಾಡುತ್ತದೆ. ಅದು ಮನುಷ್ಯನ ಪ್ರಾರಬ್ಧವೂ ಆಗಿರಬಹುದು, ಕಟ್ಟಡದ ಪ್ರಾರಬ್ಧವೂ ಆಗಿರಬಹುದು.

ರಿಚಿ ಆಂಟಿ ಮತ್ತು ಸುಷಮಾಳ ತಾಯಿ ಸುನೀತಿ ಸಮವಯಸ್ಕರಾಗಿದ್ದರು. ಆಗ ಸುನೀತಿದೇವಿ ಸೀನಿಯರ್ ಕೆಂಬ್ರಿಜ್ ಪಾಸು ಮಾಡಿದ್ದಳು. ಅದರಿಂದಾಗಿ ಅವಳು ಸುಲಭ, ನಿರ್ಭಯದಿಂದ ಇಂಗ್ಲಿಷ್ ಮಾತಾಡುತ್ತಿದ್ದಳು. ಪಿಯಾನೊ ಮತ್ತು ಆರ್ಗನ್ ನುಡಿಸುವುದರಲ್ಲಿ ನಿಪುಣಳಾಗಿದ್ದಳು. ಸುಷಮಾಳ ಅಜ್ಜ ಪ್ರಸಿದ್ಧ ಫಾರಿನ್ ರಿಟರ್ನ್ಡ್ ಡಾಕ್ಟರರಾಗಿದ್ದರು. ಅದರಿಂದ ಸುಷಮಾಳ ತಾಯಿಗೆ ಆಧುನಿಕ ಶಿಕ್ಷಣ ಪಡೆಯುವ ಭಾಗ್ಯ ಸಹಜವಾಗಿ ಬಂತು. ಅವಳು ಪಿಯಾನೊದಲ್ಲಿ ಇಂಗ್ಲಿಷ್ ಗೀತೆ ನುಡಿಸಿ ಹಾಡುವಷ್ಟೇ ಸಹಜವಾಗಿ ರವೀಂದ್ರರ ಸಂಗೀತವನ್ನು ನುಡಿಸುತ್ತ ಹಾಡುತ್ತಿದ್ದಳು. ಅಷ್ಟೇ ಅಲ್ಲ ಹಾರ್ಮೋನಿಯಂನಲ್ಲಿ ಒಡಿಯಾ ಗೀತೆ, ಒಡಿಯಾ ಭಜನ, ಚಂಪೂ ಆದಿ ಹಾಡುಗಳನ್ನು ಸುಮಧುರ ಸ್ವರದಲ್ಲಿ ಹಾಡಿ ಕೇಳುಗರನ್ನು ರಂಜಿಸುತ್ತಿದ್ದಳು. ರಿಚಿ ಆಂಟಿ ಸುಷಮಾಳ ತಾಯಿಯ ಹಾಡಿಗೆ ಹುಚ್ಚಾಗಿ ಬಿಡುತ್ತಿದ್ದರು. ಅವಳು ಗಂಟೆಗಟ್ಟಲೆ ಸುಷಮಾಳ ತಾಯಿಯ ಪಕ್ಕದಲ್ಲಿ ಕುಳಿತುಕೊಂಡು ರವೀಂದ್ರ ಸಂಗೀತ, ಜಗನ್ನಾಥ ಭಜನ, ಮಹಿಮಾ ಕೀರ್ತನ ಇತ್ಯಾದಿ ಕೇಳುತ್ತ ಚಪ್ಪಾಳೆ ತಟ್ಟಿ ತಟ್ಟಿ ಸುನೀತಾಳ ಉತ್ಸಾಹ ಹೆಚ್ಚುವಂತೆ ಮಾಡುತ್ತಿದ್ದಳು. ಇದನ್ನೆಲ್ಲ ಯೋಚಿಸುತ್ತ ಸುಷಮಾ ಅಂದಿನ ದಿನಗಳಲ್ಲಿ ಮೈಮರೆತಿದ್ದಳು. ಅಂದು ಸುನೀತಿ ಪಿಯಾನೊ ನುಡಿಸುತ್ತಿದ್ದರೆ ರಿಚಿ ಆಂಟಿ ಭಾವಭಾರದಲ್ಲಿ ಹಾಡುತ್ತಿದ್ದಳು. 'ಕಂಟ್ರಿ ರೋಡ್ಸ್... ಟೇಕ್ ಮಿ ಹೋಮ್, ಟೇಕ್ ಮಿ ಹೋಮ್' ಹಾಡು ಹಾಡುತ್ತ ಇಬ್ಬರ ಕಣ್ಣಾಲಿಗಳು ತುಂಬಿ ಬಂದವು. ಅವರಿಗೆ ತಮ್ಮ ತಮ್ಮ ದೇಶದಲ್ಲಿ ಬಿಟ್ಟು ಬಂದ ತಂದೆತಾಯಿ, ಬಂಧುಬಳಗದ ನೆನಪು ಬಂದಿರಬಹುದು. ರಿಚಿಯ ತಂದೆ ತಾಯಿ ಇಂಗ್ಲೆಂಡಿನ ಯಾರ್ಕ್‌ಶಾಯರ್‌ನಲ್ಲಿ, ಸುಷಮಾಳ ಅಜ್ಜ ಅಜ್ಜಿಯರು ಒಡಿಶಾ ರಾಜ್ಯದ ಕಟಕ್‌ನಲ್ಲಿರುತ್ತಿದ್ದರು. ದೂರ ಹೆಚ್ಚು ಕಡಿಮೆಯಿದ್ದರೂ ಅವರಿಬ್ಬರ ಹೃದಯದಲ್ಲಿ ಸ್ವಜನರ ಬಗ್ಗೆ ಗೌರವ, ಪ್ರೀತಿ, ಆತ್ಮೀಯತೆಗಳು ಸಮಾನವಾಗಿದ್ದವು.

ಒಂದು ದಿನ ಸುಷಮಾಳ ತಾಯಿ ಸುನೀತಿದೇವಿ ಹೇಳಿದ್ದಳು. 'ರಿಚಿಯ ಅಪ್ಪ ಮಿಸ್ಟರ್ ಬ್ರೌನ್ (brown) ಇಂಡಿಯಾದಲ್ಲಿ ದೊಡ್ಡ ಸಿವಿಲ್ ಎಂಜಿನಿಯರ್ ಆಗಿದ್ದರು. ಚೀಫ್ ಎಂಜಿನಿಯರ್ ಆಗಿ ನಿವೃತ್ತರಾದ ಬಳಿಕ ಅವರು ಮೈಸೂರು ಮಹಾರಾಜರ ಕರೆಯ ಮೇರೆಗೆ ಬೆಂಗಳೂರಿಗೆ ಬಂದಿದ್ದರು. ಅವರು ತಮ್ಮ ತಮ್ಮ ಸಂಸಾರದೊಂದಿಗೆ ಹಾಯಾಗಿ ಇಲ್ಲಿಯೇ ಇರಲಿ ಎಂಬ ಉದ್ದೇಶದಿಂದ ಮೂರು ಎಕರೆ ಭೂಮಿಯನ್ನು ಉದಾರವಾಗಿ ಕೊಟ್ಟಿದ್ದರಂತೆ.

ಮಿಸ್ಟರ್ ಬ್ರೌನ್ ದಯಾಳು ಆಗಿದ್ದರು. ಇತರ ಬ್ರಿಟಿಷರಂತೆ ಅಹಂಕಾರಿಯಾಗಿರಲಿಲ್ಲ. ಭಾರತೀಯ ಪರಂಪರೆ, ರೀತಿ ರಿವಾಜು, ಸಂಸ್ಕೃತಿಯನ್ನು ಅವರು ಗೌರವಿಸುತ್ತಿದ್ದರು. ನಿಕ್ ಅಂಕಲ್ ಅಂದರೆ ರಿಚಿ ಆಂಟಿಯ ಪತಿ ನಿಕೊಲಸ್ ವಿಲಿಯಮ್ಸ್‌ರು ಆಂಗ್ಲೋ ಇಂಡಿಯನ್. ಆದರೆ ಅವರ ಮಾತು, ಮುಖಭಾವಗಳಿಂದ ಅವರು ಇಂಗ್ಲಿಷರಲ್ಲ ಎಂದು ಹೇಳಲು ಬರುತ್ತಿರಲಿಲ್ಲ. ಸುಷಮಾಳಿಗೆ ಯಾರೊ ಹೇಳಿದ್ದರು ನಿಕ್ ಅಂಕಲ್‌ನ ತಂದೆ ಉನ್ನತ ಪದಾಧಿಕಾರಿಯಾಗಿದ್ದರು ಎಂದು. ಇಂಡಿಯಾದಲ್ಲಿರುತ್ತಿದ್ದುದರಿಂದ ಅವರು ಸುಂದರ ಅಯ್ಯಂಗಾರ್ ಹುಡುಗಿಯ ಮೋಹಜಾಲದಲ್ಲಿ